## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂ:4700/2024

ಸಿ.ಡಬ್ಲ್ಯೂ–1 ಪಿ.ಡಬ್ಲ್ಯೂ–1

| | | |
|---|---|---|
| ಹೆಸರು | ಃ | ಸೈಯದ ಅಲ್ತಾಫ ಹುಸೇನ |
| ತಂದೆಃಗಂಡ | ಃ | ಸೈಯ್ಯದ ಇಜಾಜ ಹುಸೇನೆ |
| ವಯಸ್ಸು | ಃ | 61 ವರ್ಷ |
| ಉದ್ಯೋಗ | : | ನಿವೃತ್ತ ಎಇಇ |
| ವಾಸಸ್ಥಳ | ಃ | ಕೋರವಾರ |

ದಿನಾಂಕಃ13.02.2025

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ನಾನು 31.07.2021 ರಿಂದ ಎಇಇ ಎಂದು ಕಾರ್ಯ ನಿರ್ವಹಿಸಿರುತ್ತೇನೆ. ಆರೋಪಿತರ ಪರಿಚಯ ಇರುತ್ತಾರೆ. ಚಾಸಾ-2 ರಿಂದ 6 ರವರ ಪರಿಚಯ ಇರುತ್ತದೆ.

ಆರೋಪಿತರು ಅಂಬಲಗಾ ಗ್ರಾಮ ಸೀಮಾಂತರದ ಗಂಡೋರಿ ನಾಲಾ ಜಲಾಶಯದ ಹಿನ್ನಿರಿನ ಸುತ್ತಲಿನ ಕರ್ನಾಟಕ ನೀರಾವರಿ ನಿಗಮ ನಿಯಮಿತ ಅಧಿನದಲ್ಲಿರುವ ನಿರ್ಭಂದಿತ ಪ್ರದೇಶದಲ್ಲಿ ಅನಧಿಕೃತವಾಗಿ ಫಲವತ್ತಾದ ಮಣ್ಣನ್ನು ಯಾವುದೇ ಪರವಾನಿಗೆ ಇಲ್ಲದೇ ಮಾರ್ಚ ತಿಂಗಳಿನಿಂದ ತೆಗೆದುಕೊಂಡು ಹೋಗುತ್ತಿದ್ದರಿಂದ ನಾನು ದಿ.08.04.2024 ರಂದು ಆರೋಪಿತರ ವಿರುದ್ಧ ದೂರು ನೀಡಿರುತ್ತೇನೆ. ನಂತರ ದಿ.11.04.2024 ರಂದು ಪೋಲಿಸರು ತಮ್ಮ ತಂಡದೊಂದಿಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿದಾಗ ಸ್ಥಳದಿಂದ ಒಂದು 110 ಎಕ್ಸವೇಟರ, 2 ಟ್ರಾಕ್ಟರಗಳು ಸಿಕ್ಕಿರುತ್ತವೆ.

ಸಾಕ್ಷಿಗೆ ಈಗ ಅವರು ನೀಡಿದ ದೂರನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ದೂರನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಒಟ್ಟು 5 ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-2 ರಿಂದ 6 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

Sl.No.301D00235(Hitachi Hundai R110 hdrolic excavator and JCB No.KA-32/C-8985, Tractor Trolly No.KA-32/TA-3797 Engine No.KA-18TA5631, Tractor Engine No.KA33TA4366, Tractor Trolly No.KA32TB4883 ಈ ವಸ್ತುಗಳನ್ನು ಉಪಯೋಗಿಸಿ ಆರೋಪಿತರು ಘಟನಾ ಸ್ಥಳದಲ್ಲಿರುವ ಫಲವತ್ತಾದ ಮಣ್ಣನ್ನು ಅನಿಧಿಕೃತವಾಗಿ ತೆಗೆಯುತ್ತಿದ್ದರು ಎಂದರೆ ಸರಿ. ಆರೋಪಿತರು ದಿ.10.03.2024 ರಿಂದ ದಿ.11.04.2024 ರ ವರೆಗೆ ಸುಮಾರು 2 ಲಕ್ಷ ಬೆಲೆಬಾಳುವ ಮಣ್ಣನ್ನು ಯಾವುದೇ ಪರವಾನಿಗೆ ಇಲ್ಲದೇ ತೆಗೆದಿರುತ್ತಾರೆ ಎಂದರೆ ಸರಿ. ನಾನು ಪೋಲಿಸರಿಗೆ ಹೇಳಿಕೆ ಮತ್ತು ಪುರವಣಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ**

ನಾನು ದೂರನ್ನು ನೀಡುವ ದಿನಾಂಕದಂದು ಗಂಡೋರಿ ನಾಲಾ ಜಲಾಶಯದಲ್ಲಿ ಎಇಇ ಎಂದು ಕಾರ್ಯನಿರ್ವಹಿಸುತ್ತಿದ್ದೇನು. ಸದರಿ ನಾಲಾ ಜಲಾಶಯಕ್ಕೆ ಸಂಬಂಧಿಸಿದ ಎಲ್ಲ ಜವಾಬ್ದಾರಿ ನನಗೆ ಇರುತ್ತದೆ ಎಂದರೆ ಸರಿ. ಸದರಿ ನಾಲಾ ಜಲಾಶಯದ ಜಮೀನು ನಿರ್ಭಂದಿತ ಪ್ರದೇಶ ಇರುತ್ತದೆ. ನಾನು ಸಮಯಕ್ಕೆ ಸರಿಯಾಗಿ ಸದರಿ ಜಾಗದ ತಪಾಸಣೆ ಮಾಡುತ್ತಿದ್ದೇನು. ಗಂಡೋರಿ ನಾಲಾ ಪ್ರದೇಶವು ಹಿನ್ನಿರಿನಿಂದ ಜಲಾವೃತವಾದ್ದರಿಂದ ಸದರಿ ಜಾಗದಲ್ಲಿ ಬೇಲಿ ಹಾಕಲು ಬರುವುದಿಲ್ಲ. ಸದರಿ ಪ್ರದೇಶಕ್ಕೆ ಜಲಾಶಯದ ಹತ್ತಿರ ಸುರಕ್ಷತೆಗಾಗಿ 24X7 ಸೆಕ್ಯೂರಿಟಿ ಗಾರ್ಡಗಳು ಇರುತ್ತಾರೆ ಎಂದು ನುಡಿಯುತ್ತಾರೆ. ನನಗೆ ಸದರಿ ಜಲಾಶಯದ ಎಲ್ಲ ಕರ್ತವ್ಯಗಳ ಬಗ್ಗೆ ಮಾಹಿತಿ ಇರುತ್ತದೆ. ಸದರಿ ಜಲಾಶಯಕ್ಕೆ ಸಂಬಂಧಿಸಿದಂತೆ ಯಾವುದಾದರೂ ಅಪಕೃತ್ಯ ನಡೆದರೆ ಅದರ ಬಗ್ಗೆ ತಕ್ಷಣ ದೂರು ನೀಡಬೇಕೆಂದು ನಿಯಮ ಇರುತ್ತದೆ ಎಂದರೆ ಸರಿ. ನಾನು ದೂರನ್ನು ನೀಡುವಾಗ ಸರಿಯಾಗಿ ಕರ್ತವ್ಯ ನಿರ್ವಹಿಸಿಲ್ಲ ಎಂದರೆ ಸರಿಯಲ್ಲ. ನನಗೆ ದಿ.10.03.2024 ರಿಂದ ಒಂದು ತಿಂಗಳ ಅವಧಿಯವರೆಗೆ ಅರೋಪಿತರು ಮಣ್ಣನ್ನು ತೆಗೆದುಕೊಂಡು ಹೋಗುತ್ತಿದ್ದ ಬಗ್ಗೆ ನನಗೆ ಮಾಹಿತಿ ಇದ್ದರೂ ನಾನು ಪೋಲಿಸರಿಗೆ ದೂರನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಮಾಹಿತಿ ಬಂದ ನಂತರ ನಾನು ನಮ್ಮ ಅಧಿಕಾರಿಗಳನ್ನು ಕಳುಹಿಸಿ ಆರೋಪಿತರಿಗೆ ತಿಳಿಹೇಳಿದರೂ ಸಹ ಅವರು ಕೇಳದೇ ಇದ್ದುದ್ದರಿಂದ ದಿ.08.04.2024 ಕ್ಕೆ ದೂರು ನೀಡಿರುತ್ತೇನೆ ಎಂದು ಹೇಳುತ್ತಾರೆ. ಸದರಿ ಪ್ರ ಪ್ರದೇಶದಲ್ಲಿ ಯಾವುದಾದರೂ ಕಾನುನು ಬಾಹಿರ ಕೃತ್ಯ ನಡೆದರೆ ಅದಕ್ಕೆ ದಂಡ ವಿಧಿಸುವ ಮತ್ತು ಶಿಕ್ಷೆ ನೀಡುವ ಮತ್ತು ವಿಚರಣೆ ಮಾಡುವ ಅಧಿಕಾರ ನನಗೆ ಇರುವುದಿಲ್ಲ ಆದರೆ ಕೇವಲ ಮೇಲಾಧಿಕಾರಗಳಿಗೆ ವರದಿ ನೀಡುವ ಜವಾಬ್ದಾರಿ ಇರುತ್ತದೆ ಎಂದು ನುಡಿಯುತ್ತಾರೆ. ಆರೋಪಿಗಳು ಘಟನಾ ಸ್ಥಳದಲ್ಲಿ ಮಣ್ಣು ತೆಗೆದುಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಮಣ್ಣು ತೆಗೆದುಕೊಂಡು ಹೋಗುವಾಗ ಅವರನ್ನು ತಡೆಯುವ ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಮಣ್ಣನ್ನು ತೆಗೆದುಕೊಂಡು ಹೋಗುವಾಗ ತಡೆಯವ ಪ್ರಯತ್ನ ಮಾಡಿರುವುದಿಲ್ಲ ಮತ್ತು ಅಧಿಕಾರಿಗಳು ಮಣ್ಣು ಕಳುವಾದ ಬಗ್ಗೆ ದೂರನ್ನು ನೀಡಿದಾಗ ಆರೋಪಿತರ ವಿರುದ್ಧ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅಧಿಕಾರದ ಅವಧಿಯಲ್ಲಿ ಮಣ್ಣು ಕಳುವಾಗಿದ್ದ ಕಾರಣ ನನ್ನ ಮೇಲೆ ಬರುವ ತನಿಖೆಯನ್ನು ತಪ್ಪಿ ಸಲು ಆರೋಪಿತರ ವಿರುದ್ಧ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಕೆಲಸವನ್ನು ಸರಿಯಾಗಿ ಮಾಡದೇ ಇದ್ದ ಕಾರಣ ಮತ್ತು ನನ್ನ ಅಧಿಕಾರದ ಅವಧಿಯಲ್ಲಿ ಮಣ್ಣು ಕಳುವಾದ ಕಾರಣ ನನ್ನ ಮೇಲೆ ಬರುವ ಆರೋಪವನ್ನು ತಪ್ಪಿಸಲು ನಾನು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಮಾರ್ಚ ತಿಂಗಳಿನಲ್ಲಿ ನನ್ನ ಮೇಲಾಧಿಕಾರಿಗಳಿಗೆ ಆರೋಪಿತರು ಮಣ್ಣು ತೆಗೆಯುತ್ತಿದ್ದ ಬಗ್ಗೆ ತಿಳಿಸಿರುತ್ತೇನೆ. ನಾನು ಮೇಲಾಧಿಕಾರಿಗಳಿಗೆ ವಿಷಯ ತಿಳಿಸಿದ ಬಗ್ಗೆ ದಾಖಲೆಗಳನ್ನು ನೀಡಿರುವುದಿಲ್ಲ ಆದರೆ ಸಾಕ್ಷಿಯು ಮುಂದುವರೆದು ಫೋಟೊಗಳನ್ನು ಪೋಲಿಸರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ದೂರು ನೀಡುವುದಕ್ಕಿಂತ ಮುಂಚಿತವಾಗಿಯೇ ನನ್ನ ಮೇಲಾಧಿಕಾರಿಗಳಿಗೆ ಆರೋಪಿತರು ಮಾಡುತ್ತಿರುವ ಕೆಲಸದ ಬಗ್ಗೆ ತಿಳಿಸಿರುತ್ತೇನೆ. ನನಗೆ ಜಮೀನನ್ನು ಅಳತೆ ಮಾಡುವ ಬಗ್ಗೆ ತಿಳುವಳಿಕೆ ಇರುತ್ತದೆ. ಆರೋಪಿತರು ಎಷ್ಟು ಅಳತೆಯ ಜಮೀನಿನಲ್ಲಿ ಮಣ್ಣನ್ನು ತೆಗೆದಿರುತ್ತಾರೆ ಎಂದು ನಾವು ಅಳತೆ ಮಾಡಿರುವುದಿಲ್ಲ. ನಾವು ಸದರಿ ಘಟನಾ ಪ್ರದೇಶವು ನಮ್ಮ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ತೋರಿಸಲು ಪೋಲಿಸರಿಗೆ ಯಾವುದೇ ದಾಖಲೆ ನೀಡಿರುವುದಿಲ್ಲ ಆದರೆ ಸದರಿ ಪ್ರದೇಶವು ನಮ್ಮ ವ್ಯಾಪ್ತಿಗೆ ಬರುತ್ತದೆ. ಸಾಕ್ಷಿಯು ಮುಂದುವರೆದು ಎಲ್ಲಿಯವರೆಗೂ ನೀರು ಬರುತ್ತದೆ ಅದು ನಮ್ಮ ಜಾಗ ಎಂದು ನುಡಿಯುತ್ತಾರೆ. ಗಂಡೋರಿ ನಾಲಾಗೆ ಹತ್ತಿಕೊಂಡು ಊರುಗಳು ಮತ್ತು ಖಾಸಗಿ

ಜಾಗಗಳು ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಘಟನಾ ಸ್ಥಳವು ನಮ್ಮ ವ್ಯಾಪ್ತಿಗೆ ಬರುತ್ತದೆ ಎಂದು ಹೇಳುತ್ತಾರೆ. ಅತಿವೃಷ್ಟಿ ಆದ ಸಮಯದಲ್ಲಿ ಜಲಾಶಯ ನೀರಿನ ಮಟ್ಟ ಹೆಚ್ಚು ಕಡಿಮೆ ಆಗುವ ಸಾದ್ಯತೆ ಇದ್ದು ನೀರು ಹೆಚ್ಚಾದಾಗ ಅದು ಊರಿನಲ್ಲಿ ಮತ್ತು ಖಾಸಗಿ ಜಾಗಗಳಲ್ಲಿ ಹೋಗುತ್ತದೆ ಎಂದರೆ ಸರಿಯಲ್ಲ. ಮಳೆ ನೀರಿನಿಂದ ಅಕ್ಕ ಪಕ್ಕದ ಜಮೀನಿನ ಮಣ್ಣು ಜಲಾಶಯದಲ್ಲಿ ಕೊಚ್ಚಿಕೊಂಡು ಬರುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಎಷಲ್ಟು ಮಣ್ಣನ್ನು ತೆಗೆದಿರುತ್ತಾರೆ ಎಂದು ಗೊತ್ತಾಗದೇ ಎಷ್ಟು ರಾಜಧನ ಪಾವತಿಸಬೇಕು ಎಂದು ಗೊತ್ತಾಗುವುದಿಲ್ಲ ಎಂದರೆ ಸರಿ. ದೂರಿನಲ್ಲಿ ಸುಮಾರು 2 ಲಕ್ಷ ಹಣವನ್ನು ಪಾವತಿಸಬೇಕೆಂದು ಅಂದಾಜಿನ ಮೇಲೆ ಬರೆದಿರುತ್ತೇವೆ ಎಂದರೆ ಸರಿ. ಮಣ್ಣನ್ನು three dimension ಅಳತೆ ಮಾಡುತ್ತೇವೆ ಎಂದರೆ ಸಾಕ್ಷಿಯು ಕ್ಯೂಬಿಕ ಮೀಟರನಲ್ಲಿ ಮಾಡುತ್ತೇವೆ ಎಂದು ನುಡಿಯುತ್ತಾರೆ. ನಾವು ಉದ್ದ-ಅಗಲ-ಎತ್ತರದ ಪ್ರಕಾರ ಅಳತೆ ಮಾಡುತ್ತೇವೆ. ಸದರಿ ಮಣ್ಣನ್ನು ಹಿನ್ನಿರು ಹರಿಯುವ ದಿಕ್ಕಿನಲ್ಲಿ ತೆಗೆದಿರುತ್ತಾರೋ ಅಥವಾ ಬೇರೆ ದಿಕ್ಕಿನಲ್ಲಿ ತೆಗೆದಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಗಂಡೋರಿ ನಾಲಾ ಜಲಾಶಯದಲ್ಲಿ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡದ ಕಾರಣ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಅಂಬಲಗಾ ಕಡೆ ಇರುವ ಮಣ್ಣನ್ನು ತೆಗೆದುಕೊಂಡು ಹೋಗಿರುತ್ತಾರೆ. ಆರೋಪಿತರು ತೆಗೆದುಕೊಂಡು ಹೋದ ಮಣ್ಣನ್ನು ಎನು ಮಾಡಿರುತ್ತಾರೆ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ಆರೋಪಿತರು ಮಣ್ಣನ್ನು ಯಾರಿಗೆ ಕೊಟ್ಟಿರುತ್ತಾರೆ ಎಂದು ವಿಚಾರಣೆ ಮಾಡಿರುವುದಿಲ್ಲ. ಸಾಕ್ಷಿಯು ಸದರಿ ವಿಚಾರಣೆ ಮಾಡುವ ಅಧಿಕಾರ ನಮಗೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಗಂಡೋರಿ ನಾಲಾ ಜಾಗೆಯು ದೊಡ್ಡದಾದ ಕಾರಣ ಅದರ ವಿಸ್ತಿರ್ಣ ಮತ್ತು ಖಾಸಗಿ ಜಾಗದ ವ್ಯತ್ಯಾಸ ನಮ್ಮ ಅಧಿಕಾರಿಗಳಿಗೆ ಹೊರತುಪಡಿಸಿ ಸಾಮಾನ್ಯ ಜನರಿಗೆ ಗೊತ್ತಾಗುವುದಿಲ್ಲ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ಸುತ್ತಮುತ್ತಲಿನ ಹಳ್ಳಿಯ ಜನರಿಗೆ ಗೊತ್ತು ಎಂದು ನುಡಿಯುತ್ತಾರೆ. ಗಂಡೋರಿ ನಾಲಾ ಜಲಾಶಯದಲ್ಲಿ ಇದ್ದ ಮಣ್ಣನ್ನು ಖಾಸಗಿ ವ್ಯಕ್ತಿಗಳು ತೆಗೆದುಕೊಂಡು ಹೋಗಬಾರದು ಮತ್ತು ತೆಗೆದರೆ ಅದು ಅಪರಾಧವಾಗುತ್ತದೆ ಎಂದು ನಿಯಮಗಳು ಇರುತ್ತವೆ.
(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದುಡಲಾಯಿತು)

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.